2018 ಕ.ತೀ.ವ. 263

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಶ್ರೀಮತಿ ಮಲ್ಲವ್ವ -ವಿರುದ್ಧ- ಶ್ರೀಮತಿ ಚಂದ್ರಾಬಾಯಿ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಅಡಿಯಲ್ಲಿ ನಿಯತ ಎರಡನೇ ಅಪೀಲು.

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – 41ನೇ ಕ್ರಮಾದೇಶದ 31ನೇ ನಿಯಮ.

ಇದು, ಮೊದಲ ಅಪೀಲು ನ್ಯಾಯಾಲಯವು, ತೀರ್ಪು ಹಾಗೂ ಡಿಕ್ರಿಯನ್ನು ಅಧಿವಿಚಾರಣಾ ನ್ಯಾಯಾಲಯವು ನೀಡಿದ್ದ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಿ, ಭಾಗಶಃ ಅಂಗೀಕರಿಸಿ ಹೊರಡಿಸಿರುವ ಆ ಮೂಲಕ, ಪಾಲು ಹಾಗೂ ಪ್ರತ್ಯೇಕ ಅಧಿಭೋಗಕ್ಕಾಗಿನ ಮಾರ್ಪಾಡಿತ ಡಿಕ್ರಿಯನ್ನು ಹೊರಡಿಸಿರುವುದನ್ನು ನಿರಾಕರಿಸಿ ವಾದಿಯು ಸಲ್ಲಿಸಿರುವ ಅಪೀಲಾಗಿರುತ್ತದೆ. ಅನುಕೂಲತೆಯ ದೃಷ್ಟಿಯಿಂದ ಪಕ್ಷಕಾರರನ್ನು ದಾವೆಯಲ್ಲಿನ ಅವರ ಸಂಖ್ಯೆಗನುಸಾರವಾಗಿಯೇ ಉಲ್ಲೇಖಿಸಲಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ, ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು, ಪಕ್ಷಕಾರರು ಒದಗಿಸಿದಂಥ ಸಾಕ್ಷ್ಯವನ್ನು ಸ್ವಲ್ಪಮಟ್ಟಿಗೂ ಪ್ರಸ್ತಾಪಿಸಿರುವುದಿಲ್ಲ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ತೀರ್ಪನ್ನು ಮಾರ್ಪಾಡುಗೊಳಿಸಬೇಕಾದ ಅಗತ್ಯತೆಯಿರುತ್ತದೆಂಬ ತೀರ್ಮಾನಕ್ಕೆ ಹೇಗೆ ಬಂದರು ಎಂಬುದನ್ನು ಸಹ

* ನಿಯತ ಎರಡನೇ ಅಪೀಲು ಸಂ.100824/2014 (ಪಿಎಆರ್ & ಎಸ್‌ಪಿ), ದಿನಾಂಕ: 13ನೇ ಜುಲೈ, 2016

ಸೂಚಿಸಿರುವುದಿಲ್ಲ. ಪಕ್ಷಕಾರರ ನಿವೇದನೆಗಳನ್ನು ಪರಿಗಣಿಸಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 31ನೇ ನಿಯಮದ XLI ಕ್ರಮಾದೇಶದ ಅಗತ್ಯತೆಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದ್ದು, ನೀಡಿರುವ ಸದರಿ ತೀರ್ಪಿನಲ್ಲಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಒಳಗೊಂಡಿರುವ ಯಾವ ಅಂಶವನ್ನು ಮಾರ್ಪಾಡುಗೊಳಿಸಬೇಕೆಂಬುದಕ್ಕೆ ಯಾವುದೇ ಆಧಾರ ಅಥವಾ ಕಾರಣವನ್ನು ಪ್ರಸ್ತಾಪಿಸಿರುವುದಿಲ್ಲ. ಅಧೀನ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ತೀರ್ಮಾನಕ್ಕೆ ಪೂರಕವಾಗಿ ಯಾವುದೇ ಕಾರಣವನ್ನು ದಾಖಲಿಸದೆ ತೀರ್ಮಾನಕ್ಕೆ ಬಂದಿರುತ್ತಾರೆ. ಹಾಗಾಗಿ, ಅಪೀಲನ್ನು ನಿರ್ಧರಿಸುವಲ್ಲಿನ ಕಾರ್ಯವಿಧಾನದಲ್ಲಿ ಗಂಭೀರ ಸ್ವರೂಪದ ದೋಷ ಹಾಗೂ ನ್ಯಾಯಿಕ ದೃಷ್ಟಿಕೋನದ ಸಮಗ್ರ ಕೊರತೆ ಉಂಟಾಗಿರುವುದು ಸ್ಪಷ್ಟವಾಗಿರುತ್ತದೆ. ಪ್ರಶ್ನಿತ ತೀರ್ಪು ವ್ಯತಿರಿಕ್ತವಾದ, ಮನಸ್ಸಿಗೆ ಬಂದ ಹಾಗೆ ನೀಡಿದ, ಕಾನೂನು ಬಾಹಿರವಾದ ತೀರ್ಪಾಗಿದೆ. ಅಪೀಲನ್ನು ತೀರ ನಿರ್ಲಕ್ಷ್ಯದಿಂದ ತೀರ್ಮಾನಿಸಿದ್ದು, ಮಾನ್ಯ ವಕೀಲರಾದ ಶ್ರೀ ಎಂ.ಜಿ. ನಾಗನುರಿಯವರು, ಪ್ರಶ್ನಿತ ತೀರ್ಪು ನಿರ್ದಯವಾಗಿಯೂ, ಅನ್ಯಾಯದಿಂದ ಕೂಡಿದೆಯೆಂದು ಕಟುವಾಗಿ ಟೀಕಿಸಿರುವುದು ಸಮರ್ಥನೀಯವಾಗಿರುತ್ತದೆ.

ಪರಿಣಾಮವಾಗಿ, ಅಪೀಲನ್ನು ಅಂಗೀಕರಿಸಿ, ಮೊದಲ ಅಪೀಲು ನ್ಯಾಯಾಲಯದ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಿದೆ. ವಿಷಯವನ್ನು ಹೇಳಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಹೊಸದಾಗಿ ತೀರ್ಪು ನೀಡುವ ಮೊದಲ ಅಪೀಲು ನ್ಯಾಯಾಲಯದ ಮರುವಿಚಾರಣೆಗಾಗಿ ಹಿಂದಕ್ಕೆ ಕಳುಹಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. (2001) 4 ಎಸ್‌ಸಿಸಿ 756, ಮಧುಕರ್ ಹಾಗೂ ಇತರರು –ವಿರುದ್ಧ– ಸಂಗ್ರಾಂ ಹಾಗೂ ಇತರರು* | *(ಉಲ್ಲೇ) 12* |

2. *(2011) 15 ಎಸ್‌ಸಿಸಿ 476*
*ಬಿ.ಎಂ. ನಾರಾಯಣ ಗೌಡ -ವಿರುದ್ಧ-*
*ಶಾಂತಮ್ಮ (ಮೃತರಾದ್ದರಿಂದ ಕಾನೂನು ಸಮ್ಮತ*
*ವಾರಸುದಾರರು) ಹಾಗೂ ಮತ್ತೊಬ್ಬರು (ಉಲ್ಲೇ) 13*
3. *(2015) 11 ಎಸ್‌ಸಿಸಿ 269*
*ಶಶಿಧರ್ ಹಾಗೂ ಇತರರು -ವಿರುದ್ಧ-*
*ಅಶ್ವಿನಿ ಉಮಾ ಮಾಠದ್ ಹಾಗೂ ಮತ್ತೊಬ್ಬರು (ಉಲ್ಲೇ) 14*
4. *(2015) 1 ಎಸ್‌ಸಿಸಿ 391*
*ವಿನೋದ್ ಕುಮಾರ್ -ವಿರುದ್ಧ- ಗಂಗಾಧರ್ (ಉಲ್ಲೇ) 15*
5. *(2015) 6 ಎಸ್‌ಸಿಸಿ 158*
*ಕೆ. ಅನ್ಬಳಗನ್ -ವಿರುದ್ಧ-*
*ಕರ್ನಾಟಕ ಸರ್ಕಾರ (ಉಲ್ಲೇ) 17*

ಅರ್ಜಿದಾರರ ಪರ : ಶ್ರೀ ಎಂ.ಜಿ. ನಾಗನುರಿ, ವಕೀಲರು
ಪ್ರತ್ಯರ್ಜಿದಾರರ ಪರ : ಶ್ರೀ ಮಲ್ಲಿಕಾರ್ಜುನಸ್ವಾಮಿ ಬಿ. ಹಿರೇಮಠ, ವಕೀಲರು,
ಶ್ರೀ ಎನ್.ಡಿ. ಗುಂಡೆ, ವಕೀಲರು

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎನ್ ವೇಣುಗೋಪಾಲ ಗೌಡ:**

ಇದು, ಮೊದಲ ಅಪೀಲು ನ್ಯಾಯಾಲಯವು, ತೀರ್ಪು ಹಾಗೂ ಡಿಕ್ರಿಯನ್ನು ಅಧಿವಿಚಾರಣಾ ನ್ಯಾಯಾಲಯವು ನೀಡಿದ್ದ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಿ, ಭಾಗಶಃ ಅಂಗೀಕರಿಸಿ ಹೊರಡಿಸಿರುವ ಆ ಮೂಲಕ, ಪಾಲು ಹಾಗೂ ಪ್ರತ್ಯೇಕ ಅಧಿಭೋಗಕ್ಕಾಗಿನ ಮಾರ್ಪಾಡಿತ ಡಿಕ್ರಿಯನ್ನು ಹೊರಡಿಸಿರುವುದನ್ನು ನಿರಾಕರಿಸಿ

ವಾದಿಯು ಸಲ್ಲಿಸಿರುವ ಅಪೀಲಾಗಿರುತ್ತದೆ. ಅನುಕೂಲತೆಯ ದೃಷ್ಟಿಯಿಂದ ಪಕ್ಷಕಾರರನ್ನು ದಾವೆಯಲ್ಲಿನ ಅವರ ಸಂಖ್ಯೆಗನುಸಾರವಾಗಿಯೇ ಉಲ್ಲೇಖಿಸಲಾಗಿರುತ್ತದೆ.

2. ಈ ಪ್ರಕರಣವು, ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಡಿ.ವೈ. ಬಸಾಪುರ್‌ರವರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 1ನೇ ನಿಯಮದ XLI ಕ್ರಮಾದೇಶದೊಂದಿಗೆ ಓದಲಾದ 96ನೇ ಪ್ರಕರಣದಡಿಯಲ್ಲಿ ಸಲ್ಲಿಸಿರುವ ಅಪೀಲಿಗೆ ಅತ್ಯಂತ ನಿರ್ಲಕ್ಷ್ಯದಿಂದ ತೀರ್ಪು ನೀಡಿರುವ ಕ್ರಮದಿಂದಾಗಿ ಈ ನ್ಯಾಯಾಲಯದ ಆತ್ಮಸಾಕ್ಷಿಗೆ ಆಘಾತವನ್ನು ನೀಡಿದೆ.

3. ಸದರಿ ವಿವಾದದ ಹಿನ್ನಲೆಯಲ್ಲಿ, ಪ್ರತ್ಯರ್ಜಿದಾರರ ವಿರುದ್ಧ ಪಾಲು, ಪ್ರತ್ಯೇಕ ಅಧಿಭೋಗ, ಘೋಷಣೆ ಹಾಗೂ ಮಧ್ಯಂತರ ಲಾಭಗಳ ಡಿಕ್ರಿಯನ್ನು ಹೊರಡಿಸಲು ಅಪೀಲುದಾರನು ದಾವೆಯನ್ನು ಸ್ಲಲಿಸಿರುತ್ತಾನೆಂಬುದನ್ನು ತಿಳಿಸುವುದನ್ನು ಹೊರತುಪಡಿಸಿ ಈ ಅಪೀಲಿನಲ್ಲಿ ಉದ್ಭವವಾಗಿರುವ ವಾಸ್ತವಾಂಶಗಳನ್ನು ವಿವರವಾಗಿ ಹೇಳುವುದು ಅನಾವಶ್ಯಕವಾಗಿರುತ್ತದೆ. ಪ್ರತಿವಾದಿ ಸಂ.2 ಹಾಗೂ 5 ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ ಸಂ.1, 3 ಹಾಗೂ 4, ಪ್ರತಿವಾದಿ ಸಂ.2 ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಅಳವಡಿಸಿಕೊಂಡಿರುತ್ತಾರೆ. ವಾದಪತ್ರಗಳನ್ನು ಆಧರಿಸಿ, ಅಧಿವಿಚಾರಣಾ ನ್ಯಾಯಾಲಯವು 12 ವಿವಾದಾಂಶಗಳನ್ನು ಹಾಗೂ 2 ಹೆಚ್ಚುವರಿ ವಿವಾದಾಂಶಗಳನ್ನು ಪ್ರಸ್ತಾಪಿಸಿರುತ್ತದೆ. ವಾದಿಯನ್ನೇ ಸ್ವತಃ ಪ್ರಾ.ಸಾ.1 ಎಂದು ಇಬ್ಬರು ಸಾಕ್ಷ್ಯಗಳನ್ನು ಪರೀಕ್ಷಿಸಲಾಗಿದ್ದು, ನಿಶಾನೆ ಪಿ1 ರಿಂದ ಪಿ30 ರವರೆಗೆ ಗುರುತುಮಾಡಲಾಗಿರುತ್ತದೆ. ಪ್ರತಿವಾದಿ ಸಂ.2 ನ್ನು ಸ್ವತಃ ಪ್ರತಿವಾದಿ ಸಾಕ್ಷ್ಯ 1 ಎಂದು ಪರೀಕ್ಷೆ ಮಾಡಲಾಗಿದ್ದು, ಪ್ರತಿವಾದಿ ಸಂ.5ನ್ನು ಪ್ರತಿವಾದಿ ಸಾಕ್ಷ್ಯ 2 ಎಂದೂ ಪರೀಕ್ಷೆಮಾಡಲಾಗಿದ್ದು, ಸಾಕ್ಷ್ಯವನ್ನು ಪ್ರತಿವಾದಿ ಸಾಕ್ಷ್ಯ–3 ಎಂದು ಪರೀಕ್ಷೆಮಾಡಲಾಗಿರುತ್ತದೆ. ನಿಶಾನೆ ಡಿ1 ರಿಂದ ಡಿ48ಗಳನ್ನು ಗುರುತುಮಾಡಲಾಗಿರುತ್ತದೆ. ಅಧಿವಿಚಾರಣಾ ನ್ಯಾಯಾಲಯವು, ದಾವೆಯನ್ನು ಭಾಗಶಃ ಡಿಕ್ರಿಗೊಳಿಸಲಾಗಿದ್ದು, ವಾದಿ ಹಾಗೂ ಪ್ರತಿವಾದಿ ಸಂಖ್ಯೆ.1. ದಾವಾ ಸ್ವತ್ತುಗಳಲ್ಲಿ ಪಾಲು ಹಾಗೂ ಪ್ರತೀ ಭಾಗದಲ್ಲಿ ಅವರ 1/2 ಪಾಲಿಗೆ ಹಕ್ಕುಳ್ಳವರಾಗಿರುತ್ತಾರೆ.

ದಾವಾ ಅನುಸೂಚಿತ ಸ್ವತ್ತಿನ ಬಾಬು ಸಂ.1ರ ಸಂಬಂಧದಲ್ಲಿ ಪ್ರತಿವಾದಿ 2 ರಿಂದ 5ರ ವರೆಗೆ ಬರೆದುಕೊಟ್ಟ 23.09.1998ರ ದಿನಾಂಕದ ವಿನಿಮಯದ ಪತ್ರವನ್ನು ಕೃತಕ ದಾಖಲೆಯೆಂದು ಘೋಷಿಸಿ, ಮಧ್ಯಂತರ ಲಾಭಕ್ಕೆ ಸಂಬಂಧಿಸಿದ ಕ್ಲೇಮನ್ನು ತಿರಸ್ಕರಿಸಲಾಗಿರುತ್ತದೆ.

4. ಬಾಧಿತಗೊಂಡ ಪ್ರತಿವಾದಿಗಳು ಜಿಲ್ಲಾ ಸತ್ರ ನ್ಯಾಯಾಲಯ, ಬೆಳಗಾಂನಲ್ಲಿ ಆರ್.ಎ.ಸಂ.194/2012ನ್ನು ಸಲ್ಲಿಸಿರುತ್ತಾರೆ. ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯುವನ್ನು ಚಿಕ್ಕೋಡಿಯಲ್ಲಿ ಸ್ಥಾಪಿಸಿದ್ದರಿಂದಾಗಿ, ಅಪೀಲನ್ನು ಚಿಕ್ಕೋಡಿಯಲ್ಲಿರುವ ಬೆಳಗಾಂನ VII ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಧೀಶರಿಗೆ ವರ್ಗಾವಣೆ ಮಾಡಲಾಯಿತು. ಪ್ರಶ್ನಿತ ತೀರ್ಪಿನ ಮೂಲಕ, ಅಪೀಲನ್ನು ಭಾಗಶಃ ಅಂಗೀಕರಿಸಿ, ಆರ್.ಎ.ಸಂ.194/2012 ನಿರಾಕರಿಸಿದ ತೀರ್ಪು ಹಾಗೂ ಡಿಕ್ರಿಯಾಗಿರದಂಥ 04.08.2012ರ ಒ.ಎಸ್.ಸಂ.10/1998 ರಲ್ಲಿ ಹೊರಡಿಸಿದ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಿರುತ್ತಾರೆ. ಭಾದಿತಗೊಂಡ ವಾದಿಗಳು ಈ ಎರಡನೇ ಅಪೀಲನ್ನು ಸಲ್ಲಿಸಿರುತ್ತಾರೆ.

5. ಈ ಮುಂದೆ ನೀಡಿರುವ ಕಾನೂನಿನ ಸಾರಭೂತವಾದ ಪ್ರಶ್ನೆಗಳನ್ನು ಪರಿಗಣಿಸಲು ಈ ಅಪೀಲನ್ನು ಅಂಗೀಕರಿಸಲಾಗಿದೆ. ಅವುಗಳೆಂದರೆ:

(i) ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ವಾದಪತ್ರಗಳು ಹಾಗೂ ಸಾಕ್ಷ್ಯವನ್ನು ಪರಿಶೀಲಿಸಿರುತ್ತಾರೆಯೆ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 1ನೇ ನಿಯಮದ XLI ನೇ ಕ್ರಮಾದೇಶದೊಂದಿಗೆ ಓದಲಾದ 96ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅಪೀಲನ್ನು ಪರಿಗಣಿಸಬಹುದಾದಂಥ ಆಯಾಮಗಳ ಕಡೆ ತಮ್ಮ ಗಮನವನ್ನು ಹರಿಸಿರುತ್ತಾರೆಯೆ?

(ii) ಮೊದಲ ಅಪೀಲು ನ್ಯಾಯಾಲಯವು, ದಾವೆಯ ದಾಖಲೆಯ ಸ್ವತಂತ್ರ ನಿರ್ಧರಣೆಯಿಲ್ಲದೆ ಕೇವಲ ಯಾಂತ್ರಿಕವಾಗಿ ಅಧಿವಿಚಾರಣಾ ನ್ಯಾಯಾಲಯವು ಸಲ್ಲಿಸಿದ ವಾಸ್ತವಾಂಶಗಳ ನಿರ್ಧರಣೆಗಳನ್ನು ಮಾರ್ಪಾಡುಗೊಳಿಸಲಾಗಿದೆಯೆ?

(iii) ಅಧೀನ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪು ಹಾಗೂ ಡಿಕ್ರಿಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 31ನೇ ನಿಯುಮದ XLI ನೇ ಕ್ರಮಾದೇಶದಡಿಯಲ್ಲಿನ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸಿದೆಯೆ?

(iv) ಅಪೀಲನ್ನು ನಿರ್ಧರಿಸುವ ವಿಷಯದಲ್ಲಿ ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ಅವಿವೇಕದ ಕೃತ್ಯವನ್ನು ಹಾಗೂ ಅನುಚಿತ ನ್ಯಾಯಿಕ ವಿಧಾನವನ್ನು ಅನುಸರಿಸಿರುತ್ತಾರೆಯೆ?

6. ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ.ಜಿ. ನಾಗನುರಿ ರವರು ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ಪ್ರಕರಣವನ್ನು ನಿರ್ಧರಿಸಿರುವಂಥ ನಿರ್ಲಕ್ಷ್ಯದ ರೀತಿಗೆ ಗಂಭೀರವಾಗಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ XXನೇ ಕ್ರಮಾದೇಶದಿಂದ ಅಥವಾ 31ನೇ ನಿಯಮದ XLI ಕ್ರಮಾದೇಶ ದಿಂದ ಅಗತ್ಯಪಡಿಸಿದ ರೀತಿಯಲ್ಲಿ ಅಪೀಲನ್ನು ನಿರ್ಧರಿಸಲಾಗಿರುವುದಿಲ್ಲ ಹಾಗೂ ಕಾನೂನಿನ ದೃಷ್ಟಿಯಲ್ಲಿ ಯಾವುದೇ ತೀರ್ಪನ್ನು ನೀಡಿರುವುದಿಲ್ಲವೆಂದು ಇವರು ನಿವೇದಿಸಿಕೊಂಡಿರುತ್ತಾರೆ. ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ಅಪೀಲನ್ನು ಅಂಗೀಕರಿಸಿ ಸಂಪೂರ್ಣವಾಗಿ ದೋಷವನ್ನು ಎಸಗಿದ್ದಾರೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ಸಮುಚಿತ ತೀರ್ಪನ್ನು ವಿಪರ್ಯಯಗೊಳಿಸಿರುತ್ತಾರೆ. ಶ್ರೀ ಎಂ.ಜಿ. ನಾಗನುರಿಯವರಿಗನುಸಾರವಾಗಿ,

ಪಕ್ಷಕಾರರು ಒದಗಿಸಿದ ಸಾಕ್ಷ್ಯಗಳಿಗನುಸಾರವಾಗಿ, ಅದರ ಸಂದರ್ಭಗಳ ಹಿನ್ನಲೆಯಲ್ಲಿ ಸರಿಯಾದ ಯಥಾದೃಷ್ಟಿ ಚಿತ್ರಣವನ್ನು ಪರಿಗಣಿಸಿ ಅಧಿವಿಚಾರಣಾ ನ್ಯಾಯಾಲಯವು ದಾವೆಯನ್ನು ಡಿಕ್ರಿಗೊಳಿಸಿರುತ್ತಾರೆ ಹಾಗೂ ದಾವೆಯಲ್ಲಿ ಹೊರಡಿಸಿದ ತೀರ್ಪು ಹಾಗೂ ಡಿಕ್ರಿಯಲ್ಲಿ ಮಧ್ಯೆಪ್ರವೇಶಿಸಲು ಮೊದಲ ಅಪೀಲು ನ್ಯಾಯಾಲಯಕ್ಕೆ ಯಾವುದೇ ಅವಕಾಶವಿರುವುದಿಲ್ಲ. ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು, ಅಧಿವಿಚಾರಣಾ ನ್ಯಾಯಾಲಯದ ದಾಖಲೆಯನ್ನು ಹಾಗೂ ದಾವೆಯನ್ನು ಡಿಕ್ರಿಗೊಳಿಸುವುದಕ್ಕೆ ಸಂಬಂಧಿಸಿದ ಕಾರಣಗಳನ್ನು ಪರಿಶೀಲಿಸದೆ ವಾಸ್ತವಾಂಶಗಳ ನಿರ್ಣಯಗಳೊಂದಿಗೆ ಕಾನೂನು ಬಾಹಿರವಾಗಿ ಮಧ್ಯೆಪ್ರವೇಶಿಸಿದ್ದಾರೆಂದೂ ನಿವೇದಿಸಿಕೊಂಡಿರುತ್ತಾರೆ. ಇವರು, ನ್ಯಾಯಾಧೀಶರು ಪ್ರಕರಣದ ಬಗ್ಗೆ ತೀರ ನಿಷ್ಕರುಣಾ ದೃಷ್ಟಿಕೋನವನ್ನು ಹೊಂದಿದ್ದು, ಪ್ರಶ್ನಿತ ತೀರ್ಪು ಮನಸ್ಸಿಗೆ ತೋಚಿದಂತೆ ನೀಡಿದ ತೀರ್ಪಾಗಿದ್ದು, ಸಂಪೂರ್ಣವಾಗಿ ಕಾನೂನು ಬಾಹಿರವಾಗಿದ್ದು, ರದ್ದುಪಡಿಸಲು ತಕ್ಕದ್ದಾಗಿದೆಯೆಂದು ನಿವೇದಿಸಿಕೊಂಡಿರುತ್ತಾರೆ.

7. ಶ್ರೀ ಮಲ್ಲಿಕಾರ್ಜುನಸ್ವಾಮಿ ಬಿ. ಹಿರೇಮಠ, ಮಾನ್ಯ ವಕೀಲರು ಇವರು, ಮೊದಲು ಅಪೀಲು ನ್ಯಾಯಾಲಯದ ನ್ಯಾಯಾಧೀಶರು ಪ್ರಕರಣವನ್ನು ನಿರ್ಧರಿಸಿರುವಂಥ ರೀತಿಯನ್ನು ಗಮನದಲ್ಲಿಟ್ಟುಕೊಂಡು, ತುಂಬಾ ನ್ಯಾಯೋಚಿತವಾಗಿ, ಪ್ರಶ್ನಿತ ತೀರ್ಪು ಹಾಗೂ ಡಿಕ್ರಿಯನ್ನು ಪ್ರತಿವಾದಿಸಲು ಇವರು ಅಸಮರ್ಥವಾಗಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಇವರು ಕಾನೂನಿಗನುಸಾರವಾಗಿ ಅಪೀಲನ್ನು ನಿರ್ಧರಿಸಿರುವುದಿಲ್ಲವಾದ್ದರಿಂದ, ಪ್ರಕರಣವನ್ನು ಪರಿಗಣನೆಗೆ ಹಾಗೂ ಹೊಸದಾಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪುನರ್ವಿಚಾರಣೆಗೆ ಕಳುಹಿಸಬಹುದಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.

8. ಪ್ರಕರಣದ ದಾಖಲೆಗಳನ್ನು ವಿವರಣಾತ್ಮಕವಾಗಿ ಪರಿಶೀಲಿಸಿ, ನಿವೇದನೆಗಳನ್ನು ಪರಿಗಣಿಸಲಾಗಿರುತ್ತದೆ. ಪ್ರಕರಣದ ದಾಖಲೆಗಳು, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ 04.08.2012 ರಂದು ತೀರ್ಪು ಹಾಗೂ ಡಿಕ್ರಿಯಿಂದ ಬಾಧಿತರೆಂದು ಭಾವಿಸಿದ ಒ.ಎಸ್.ಸಂ.107/1998 ರಲ್ಲಿನ ಪ್ರತಿವಾದಿಗಳು ಬೆಳಗಾಂನ

ಜಿಲ್ಲಾ ನ್ಯಾಯಾಲಯದಲ್ಲಿ ಆರ್.ಎ.ಸಂ. 194/2012 ನ್ನು ಸಲ್ಲಿಸಿರುತ್ತಾರೆಂಬುದು ಕಂಡುಬರುತ್ತದೆ. ಅಪೀಲನ್ನು ಚಿಕ್ಕೋಡಿಯಲ್ಲಿರುವ ಬೆಳಗಾಂನ VII ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಿಗೆ ವಹಿಸಲಾದ ಅಪೀಲನ್ನು 10.11.2014 ರಂದು ಭಾಗಶಃ ಅಂಗೀಕರಿಸಿರುತ್ತಾರೆ. ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ನೀಡಿದ ತೀರ್ಪಿನ ಪೀಠಿಕಾ ಭಾಗದಲ್ಲಿ, "ಒ.ಎಸ್.ಸಂ.107/1998"ಕ್ಕೆ ಬದಲಾಗಿ ಅಥಣಿಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಕಡತದ ಮೇಲೆ "ಒ.ಎಸ್.ಸಂ.10/1998" ದಿನಾಂಕ 04.08.2012 ರಲ್ಲಿ ಹೊರಡಿಸಿದ ಡಿಕ್ರಿಯನ್ನು ರದ್ದುಪಡಿಸಲು ಅಪೀಲನ್ನು ಸಲ್ಲಿಸಲಾಗಿರುತ್ತದೆಂದು ಹೇಳಲಾಗಿರುತ್ತದೆ. ದಾವೆಯಲ್ಲಿ ಕೇವಲ 5 ಜನ ಪ್ರತಿವಾದಿಗಳಿದ್ದಾಗ್ಯೂ, ಅವರೆಲ್ಲರೂ ಅಪೀಲನ್ನು ಸಲ್ಲಿಸಿದ್ದು, ನೀಡಿರುವ ತೀರ್ಪಿನ 8ನೇ ಪ್ಯಾರಾದಲ್ಲಿ ಅಪೀಲುದಾರ–ಪ್ರತಿವಾದಿ 23 (ಬಿ), 23 (ಸಿ), 25(ಎ) ಹಾಗೂ 26 ಗಳು ಈ ಅಪೀಲಿನಲ್ಲಿ ಬಂದಿರುವಂತೆ ತೋರಿಸಲಾಗಿರುತ್ತದೆ". ಅಪೀಲನ್ನು ಹಲವಾರು ಆಧಾರಗಳ ಮೇಲೆ ಸಲ್ಲಿಸಿದ್ದಾಗ್ಯೂ, ಪ್ಯಾರಾ 8ರಲ್ಲಿ ಪ್ರಸ್ತಾಪಿಸಿರುವ ಆಧಾರಗಳು ಆಧರಿಸುವಂಥವಾಗಿರುವುದಿಲ್ಲ. ಆದರೆ "ಅವು ಸಾಮಾನ್ಯ ಆಧಾರಗಳಾಗಿರುತ್ತವೆ." ಅಪೀಲನ್ನು ಕೇವಲ 5 ಜನ ಪ್ರತಿವಾದಿಗಳು ಸಲ್ಲಿಸಿದ್ದಾಗ್ಯೂ, ನೀಡಿದ ತೀರ್ಪಿನ 10ನೇ ಪ್ಯಾರಾದಲ್ಲಿ, ಪ್ರತಿವಾದಿ ಸಂ.3 ಹಾಗೂ 28 ಮೃತ ಪಟ್ಟಿರುತ್ತಾರೆಂದು ತೋರಿಸಲಾಗಿದ್ದು, ಅವರ ಕಾನೂನು ಸಮ್ಮತ ವಾರಸುದಾರರನ್ನು ದಾಖಲೆ ಮೇಲೆ ತಂದಿರುತ್ತಾರೆ. ಪ್ರತ್ಯರ್ಜಿದಾರ ಸಂ.9, 12, 16, 17, 21, 27, 30 ರಿಂದ 32 ರವರುಗಳು ಗೈರುಹಾಜರಾಗಿದ್ದು, ಹಾಗೂ ಏಕಪಕ್ಷೀಯವಾಗಿ ಮಂಡಿಸಿರುತ್ತಾರೆ." ಅಪೀಲನ್ನು ಕಾಲಪರಿಮಿತಿಯ ಅವಧಿಯೊಳಗೆ ಸಲ್ಲಿಸಿದ್ದಾಗ್ಯೂ, ವಿಳಂಬವನ್ನು ಮನ್ನಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಮಧ್ಯಂತರ ಅಪೀಲನ್ನು ಸಲ್ಲಿಸಿರುವುದಿಲ್ಲ. ನೀಡಿರುವ ತೀರ್ಪಿನ 11ನೇ ಪ್ಯಾರವು, ವಿಳಂಬವನ್ನು ಮನ್ನಿಸಲು ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದಡಿಯಲ್ಲಿ ಮಧ್ಯಂತರ ಅಪೀಲು 1ರ ಸಲ್ಲಿಕೆಗೆ ಸಂಬಂಧಿಸಿದಂತಿರುತ್ತದೆ. ಹಾಗೂ ಪ್ರತ್ಯರ್ಜಿದಾರರು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಪ್ರಶ್ನಿತ ತೀರ್ಪಿನ 13ನೇ ಪ್ಯಾರಾದಲ್ಲಿ, "ವಿಳಂಬವನ್ನು ಮನ್ನಿಸುವುದಕ್ಕೆ ಸಂಬಂಧಿಸಿದಂತೆ ಕೂಡ ಕೋರಿಕೆ ಸಲ್ಲಿಸದಿರುವುದನ್ನು ಒಳಗೊಂಡಂತೆ"

ಪರಿಗಣನೆಗಾಗಿ ಮೂರು ಅಂಶಗಳನ್ನು ಪ್ರಸ್ತಾಪಿಸಲಾಗಿರುತ್ತದೆ. ಇತರೆ ಎರಡು ಅಂಶಗಳು ಸಾಮಾನ್ಯ ಅಂಶಗಳು ಮಾತ್ರವಾಗಿರುತ್ತದೆ. ಪರಿಶೀಲನಾಂಶ ಸಂ.1 ಪರಿಗಣನೆಗಾಗಿ ಉದ್ಭವವಾಗದಿದ್ದಾಗ್ಯೂ, ನೀಡಿರುವ ತೀರ್ಪಿನ 15 ಹಾಗೂ 16ನೇ ಪ್ಯಾರಾಗಳ ವಿಳಂಬವನ್ನು ಮನ್ನಾ ಮಾಡುವುದರೊಂದಿಗೆ, ಪರಿಶೀಲನಾಂಶ ಸಂ.1ಕ್ಕೆ ಧನಾತ್ಮಕವಾಗಿ ಉತ್ತರಿಸಲಾಗಿರುತ್ತವೆ. ನೀಡಿದ ತೀರ್ಪಿನ 15 ರಿಂದ 23ನೇ ಪ್ಯಾರಾಗಳಲ್ಲಿ ಹಾಗೂ 24ನೇ ಪ್ಯಾರಾದ ಸ್ವಲ್ಪ ಭಾಗದಲ್ಲಿ ಏನೂ ಇರುವುದಿಲ್ಲ. ಆದರೆ ಆರ್.ಎ. ಸಂ.330/2011ರಲ್ಲಿ 04.09.2014 ರಂದು ಸದರಿ ನ್ಯಾಯಾಧೀಶರೇ ಹೊರಡಿಸಿದ ತೀರ್ಪನ್ನು ನಕಲು ಮಾಡಿ, ಕಳುಹಿಸಿದ್ದು, ಇದು, ಹುಕ್ಕೇರಿಯ ಹಿರಿಯ ಸಿವಿಲ್ ನ್ಯಾಯಾಧೀಶರು ಓ.ಎಸ್. ಸಂ.49/2001ರಲ್ಲಿ ಹೊರಡಿಸಿದ 16.08.2011 ರಂದಿನ ತೀರ್ಪು ಹಾಗೂ ಡಿಕ್ರಿಯಿಂದ ಉದ್ಭವವಾಗಿರುತ್ತದೆ. ಇದನ್ನು ಆರ್.ಎ. ಸಂ.330/2011ರಲ್ಲಿ ಹೊರಡಿಸಿದ ತೀರ್ಪು ಹಾಗೂ ಡಿಕ್ರಿಯನ್ನು ಆರ್.ಎಸ್.ಎ. ಸಂ.100887/2014 ರಲ್ಲಿ ನಿರಾಕರಿಸಿದ್ದು, ಇತ್ಯರ್ಥದಲ್ಲಿರುತ್ತದೆಂದು ಹೇಳಬೇಕಾಗಿರುತ್ತದೆ.

9. ಮೇಲಿನದರ ಹಿನ್ನೆಲೆಯಲ್ಲಿ, ಪರಿಗಣಿಸಬೇಕಾಗಿರುವ ಮುಖ್ಯವಾದ ಅಂಶವೆಂದರೆ, ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿರುವ ತೀರ್ಪಿನಲ್ಲಿ ನ್ಯಾಯಿಕ ದೃಷ್ಟಿಕೋನದ ಕೊರತೆ ಇದೆಯೆ ಹಾಗೂ ಪ್ರಶ್ನಿತ ತೀರ್ಪು ಹಾಗೂ ಡಿಕ್ರಿಯು ವ್ಯತಿರಿಕ್ತವಾದ, ಮನಸೋಇಚ್ಛೆಯ ಹಾಗು ಕಾನೂನು ಬಾಹಿರವಾಗಿರುತ್ತದೆಯೇ? ಎಂಬುದಾಗಿರುತ್ತದೆ.

10. ಅಪೀಲು ದಾವೆಯು ಮುಂದುವರಿಕೆಯಾಗಿದೆಯೆಂಬುದು ಸರ್ವವಿಧಿತವಾಗಿರುತ್ತದೆ. ಹಾಗಾಗಿ, ಅಪೀಲು ಮುಖ್ಯ ವಿಷಯದ ಮರು–ಸುನಾವಣೆಯಾಗಿದ್ದು, ಅಪೀಲು ನ್ಯಾಯಾಲಯವು ಮೌಖಿಕ ಹಾಗು ದಸ್ತಾವೇಜಿಯ ಎರಡರ ಇಡೀ ಸಾಕ್ಷ್ಯವನ್ನು ಮರು ಮೌಲ್ಯ ಮಾಪನ, ಮರು ವಿವೇಚನೆ ಹಾಗೂ ಪುನರವಲೋಕಿಸಬೇಕಾಗಿರುತ್ತದೆ.

11. ಸಿವಿಲ್ ಪ್ರಕ್ರಿಯಾ ಸಂಹಿತೆಯ XLIನೇ ಕ್ರಮಾದೇಶವು ಮೂಲ ಡಿಕ್ರಿಗಳಿಂದ ಬಂದ ಅಪೀಲುಗಳೊಂದಿಗೆ ವ್ಯವಹರಿಸುತ್ತದೆ. 31ನೇ ನಿಯಮವು, ಅಪೀಲು ನ್ಯಾಯಾಲಯದ ತೀರ್ಪು ಲಿಖಿತದಲ್ಲಿರತಕ್ಕದ್ದು, ಹಾಗೂ (ಎ) ನಿರ್ಧರಣೆಗೆ ಸಂಬಂಧಿಸಿದ ಅಂಶಗಳನ್ನು; (ಬಿ) ಅದರ ಮೇಲಿನ ನಿರ್ಣಯವನ್ನು; (ಸಿ) ನಿರ್ಣಯಕ್ಕೆ ಸಂಬಂಧಿಸಿದ ಕಾರಣಗಳನ್ನು ಹಾಗೂ (ಡಿ) ಅಪೀಲು ಮಾಡಿದ ಡಿಕ್ರಿಯನ್ನು ವಿಪರ್ಯಯಗೊಳಿಸುವೆಡೆಯಲ್ಲಿ ಅಥವಾ ವ್ಯತ್ಯಸ್ಥಗೊಳಿಸುವೆಡೆಯಲ್ಲಿ ಅಪೀಲುದಾರನು ಹಕ್ಕುಳ್ಳಂಥ ಪರಿಹಾರವನ್ನು ಹೇಳತಕ್ಕದ್ದೆಂಬುದನ್ನು ವಿಧಿಸುತ್ತದೆ. ಸದರಿ ಉಪಬಂಧವನ್ನು ಅಸಂಖ್ಯಾತ ಪ್ರಕರಣಗಳಲ್ಲಿ ಪರಿಗಣಿಸಿದ್ದು, ಇದರ ಅರ್ಥ ಹಾಗೂ ವ್ಯಾಪ್ತಿಯನ್ನು ತೀರ್ಪುಗಳ ಸರಣಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ವಿವರಿಸಿರುತ್ತದೆ.

12. ***ಮಧುಕರ್ ಹಾಗೂ ಇತರರು –ವಿರುದ್ಧ– ಸಂಗ್ರಾಂ ಹಾಗೂ ಇತರರು,*** ಪ್ರಕರಣದಲ್ಲಿ [1], ಸರ್ವೋಚ್ಚ ನ್ಯಾಯಾಲಯವು ಮೊದಲ ಅಪೀಲನ್ನು ಹೇಗೆ ನಿರ್ಧರಿಸಬೇಕೆಂಬ ತತ್ವಗಳು ಹಾಗೂ ಮಾನದಂಡಗಳನ್ನು ನಿರೂಪಿಸಿರುತ್ತದೆ. ಮೊದಲ ಅಪೀಲಿನ ನ್ಯಾಯಾಲಯದಂತೆ ಇರುವ ನ್ಯಾಯಾಲಯವು, ತನ್ನ ನಿರ್ಣಯಗಳನ್ನು ದಾಖಲಿಸುವ ಮೊದಲು ಪಕ್ಷಕಾರರು ನೀಡುವ ಎಲ್ಲಾ ವಿವಾದಾಂಶಗಳು ಹಾಗೂ ಸಾಕ್ಷ್ಯದೊಂದಿಗೆ ವ್ಯವಹರಿಸುವ ನ್ಯಾಯಾಲಯದ ಮೇಲೆ ಶುಲ್ಕವನ್ನು ವಿಧಿಸುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ಮೊದಲ ಅಪೀಲು ಮೌಲ್ಯಯುತವಾದ ಹಕ್ಕಾಗಿದ್ದು, ಕಾನೂನಿನ ಪ್ರಶ್ನೆಗಳನ್ನು ಹಾಗೂ ವಾಸ್ತವಾಂಶಗಳನ್ನು ಕುರಿತಂತೆ ಸುನಾವಣೆ ಮಾಡಬೇಕಾಗಿರುತ್ತದೆ ಹಾಗೂ ಮೊದಲ ಅಪೀಲಿನಲ್ಲಿನ ತೀರ್ಪನ್ನು ಕಾನೂನಿನ ಎಲ್ಲಾ ವಿವಾದಾಂಶಗಳಿಗೆ ಹಾಗೂ ವಾಸ್ತವಾಂಶಗಳಿಗೆ ಸ್ವತ: ಅನ್ವಯಿಸಬೇಕಾಗಿರುತ್ತದೆ ಹಾಗೂ ನಿರ್ಣಯಗಳಿಗೆ ಪೂರಕವಾಗಿ ಕಾರಣಗಳನ್ನು ನೀಡುವ ಮೂಲಕ ನಿರ್ಧರಿಸಬೇಕಾಗಿರುತ್ತದೆ.

1. (2001) 4 ಎಸ್‌ಸಿಸಿ 756

13. ***ಬಿ.ಎಂ. ನಾರಾಯಣ ಗೌಡ –ವಿರುದ್ಧ– ಶಾಂತಮ್ಮ (ಮೃತರಾದ್ದರಿಂದ) ಕಾನೂನು ಸಮ್ಮತ ವಾರಸುದಾರರು ಹಾಗೂ ಮತ್ತೊಬ್ಬರು*** [2], ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಮೊದಲ ಅಪೀಲು ಅಪೀಲುದಾರರ ಮೌಲ್ಯಯುತವಾದ ಹಕ್ಕಾಗಿರುತ್ತದೆ ಹಾಗೂ ಅದರಲ್ಲಿ, ಅಧಿವಿಚಾರಣಾ ನ್ಯಾಯಾಲಯವು ನಿರ್ಧರಿಸಿದ ವಾಸ್ತವಾಂಶಗಳು ಹಾಗೂ ಕಾನೂನಿನ ಎಲ್ಲಾ ಪ್ರಶ್ನೆಗಳನ್ನು ಪರಿಗಣನೆಗಾಗಿ ಮುಕ್ತವಾಗಿದ್ದು, ಮೊದಲ ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಅತೃಪ್ತಿಕರವಾಗಿದೆಯೆಂಬುದನ್ನು ಕಂಡುಕೊಂಡು, ಅಧಿವಿಚಾರಣಾ ನ್ಯಾಯಾಲಯದ ಪ್ರಶ್ನಿತ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಬೇಕೆಂದು ಶಿಫಾರಸ್ಸು ಮಾಡಿದಲ್ಲಿ, ಮೊದಲು ಅಪೀಲು ನ್ಯಾಯಾಲಯವು ತುಂಬಾ ಎಚ್ಚರಿಕೆಯಿಂದ ವಾಸ್ತವಾಂಶಗಳು ಹಾಗೂ ಕಾನೂನನ್ನು ಎಚ್ಚರಿಕೆಯಿಂದ ಪರೀಕ್ಷಿಸಲೇಬೇಕಾಗಿರುತ್ತದೆ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದ ಬಲವಾದ ಕಾರಣಗಳನ್ನು ನೀಡಲೇಬೇಕಾಗಿರುತ್ತದೆ.

14. ***ಶಶಿಧರ್ ಹಾಗೂ ಇತರರು –ವಿರುದ್ಧ– ಅಶ್ವಿನಿ ಉಮಾ ಮಾಠದ್ ಹಾಗೂ ಮತ್ತೊಬ್ಬರು*** [3], ಪ್ರಕರಣದಲ್ಲಿ, ಮೊದಲ ಅಪೀಲು ನ್ಯಾಯಾಲಯದ ಕರ್ತವ್ಯಕ್ಕೆ ಸಂಬಂಧಿಸಿದಂತೆ ಹಿಂದಿನ ತೀರ್ಮಾನಗಳನ್ನು ಸಮೀಕ್ಷೆ ಮಾಡಿದ ತರುವಾಯ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಆದ್ದರಿಂದ, ಮೇಲೆ ನಮೂದಿಸಿದ ಸಂಹಿತೆಯ 31ನೇ ನಿಯಮದ 41ನೇ ಕ್ರಮಾದೇಶದೊಂದಿಗೆ ಓದಲಾದ 96ನೇ ಪ್ರಕರಣದಡಿಯಲ್ಲಿ ಪ್ರದತ್ತವಾದ ವ್ಯಾಪ್ತಿ ಹಾಗೂ ಅಧಿಕಾರಗಳನ್ನು ದೃಷ್ಠಿಯಲ್ಲಿಟ್ಟುಕೊಂಡು ಮೊದಲ ಅಪೀಲನ್ನು ನಿರ್ಧರಿಸುವುದು ಮೊದಲ ಅಪೀಲು ನ್ಯಾಯಾಲಯವಾಗಿರುವ,

2. (2011) 15 ಎಸ್‌ಸಿಸಿ 476

3. (2015) 11 ಎಸ್‌ಸಿಸಿ 269

ಉಚ್ಚ ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಇದನ್ನು ದುರಾದೃಷ್ಟವಶಾತ್ ಮಾಡಿರದಿದ್ದು ಆ ಮೂಲಕ ಒಂದನೇ ಅಪೀಲಿಗೆ ಸಂಬಂಧಿಸಿದಂತೆ ಸಂಗತಿಗಳ ಆಧಾರದ ಮೇಲೆ ಕ್ರಮ ಜರುಗಿಸಲು ಮೌಲ್ಯಯುತ ಅಧಿಕಾರ ಹೊಂದಿರುವ ಅಪೀಲುದಾರರಿಗೆ ಬಾಧಕವುಂಟು ಮಾಡಿದ್ದು, ಕಾನೂನು ಅವರಿಗೆ ವಿರುದ್ಧವಾಗಿ ಪರಿಣಮಿಸಿದ್ದು, ಅದಕ್ಕೆ ಪ್ರತಿಯಾಗಿ, ಕಾನೂನಿಗನುಸಾರವಾಗಿ ಅಪೀಲಿನಲ್ಲಿ ಸುನಾವಣೆಯಿಂದ ಅದನ್ನು ತಪ್ಪಿಸಲಾಗಿರುತ್ತದೆ.

15. ***ವಿನೋದ್ ಕುಮಾರ್ –ವಿರುದ್ಧ– ಗಂಗಾಧರ್*** [4], ಪ್ರಕರಣದಲ್ಲಿ ಮೊದಲ ಅಪೀಲು ನ್ಯಾಯಾಲಯದ ಕರ್ತವ್ಯಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 31ನೇ ನಿಯಮದ XLI ಕ್ರಮಾದೇಶದಲ್ಲಿನ ಮಾರ್ಗದರ್ಶಿ ಸೂತ್ರಗಳಡಿಯಲ್ಲಿ ಸಲ್ಲಿಸಿದ ಮೊದಲ ಅಪೀಲಿನ ವಿಲೆಗೆ ಸಂಬಂಧಿಸಿದಂತೆ ಸರಿಯಾದ ವಿಧಾನದೊಂದಿಗೆ, ತನ್ನ ನಿರ್ಣಯಗಳನ್ನು ದಾಖಲಿಸುವ ಮೊದಲು ಪಕ್ಷಕಾರರು ಹೇಳಿದ ಎಲ್ಲಾ ವಿವಾದಾಂಶಗಳು ಹಾಗೂ ಸಾಕ್ಷ್ಯಗಳೊಂದಿಗೆ ವ್ಯವಹರಿಸುವುದು ಮೊದಲ ಅಪೀಲು ನ್ಯಾಯಾಲಯದ ಕರ್ತವ್ಯವಾಗಿರುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ.

16. ಹಾಗಾಗಿ, ಅಪೀಲನ್ನು ನಿರ್ಧರಿಸುವಾಗ, ಮೊದಲ ಅಪೀಲು ನ್ಯಾಯಾಲಯವು ದಾಖಲೆ, ಮೌಖಿಕ ಹಾಗೂ ದಸ್ತಾವೇಜುಗಳ ಮೇಲಿನ ಸಾಕ್ಷ್ಯವನ್ನು ಹಾಗೂ ಇದರ ಎದುರು ಪ್ರಸ್ತಾಪಿಸಿರುವ ಕಾನೂನಿನ ಪ್ರಶ್ನೆಗಳನ್ನು ಪರಿಗಣಿಸಲೇಬೇಕು ಹಾಗೂ ಅದೇ ಸಮಯದಲ್ಲಿ, ಯಾರ ನಿರ್ಧಾರದ ವಿರುದ್ಧ ಅಪೀಲು ಸಲ್ಲಿಸಲಾಗಿದೆ ಎಂಬುದಕ್ಕೆ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಕಾರಣಗಳನ್ನು ಪರಿಗಣಿಸುವುದು ಇದರ ಕರ್ತವ್ಯವಾಗಿರಬೇಕು. ಆ ತರುವಾಯ, ಸಿವಿಲ್ ಪ್ರಕ್ರಿಯಾ ಸಂಹಿತೆಯ

4. (2015) 1 ಎಸ್‌ಸಿಸಿ 391

31ನೇ ನಿಯಮದ XLIನೇ ಕ್ರಮಾದೇಶದಲ್ಲಿನ ಮಾರ್ಗದರ್ಶಿ ಸೂತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಕಾರಣದ ಹಾಗೂ ಯುಕ್ತ ಕಾರಣದ ತೀರ್ಪನ್ನು ನೀಡುವ ಮೂಲಕ ಅಪೀಲನ್ನು ನಿರ್ಧರಿಸಬೇಕೆಂಬುದು ಸ್ಪಷ್ಟವಾಗಿರುತ್ತದೆ. ಸಾಮಾನ್ಯವಾಗಿ ಮೂರು ಅಗತ್ಯತೆಗಳನ್ನು ಅಪೀಲು ನ್ಯಾಯಾಲಯದ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯಗಳನ್ನು ವಿಪರ್ಯಯಗೊಳಿಸುವ ಮೊದಲು ಮಂಡಿಸಬೇಕು, ಅವುಗಳೆಂದರೆ:–

(i) ಅಧಿವಿಚಾರಣಾ ನ್ಯಾಯಾಲಯವು ನೀಡಿರುವ ಕಾರಣಗಳಿಗೆ ಇದು ತನ್ನ ಗಮನವನ್ನು ನೀಡಬೇಕು;

(ii) ಸಾಕ್ಷ್ಯಗಳನ್ನು ನೋಡುವುದರಿಂದ ಆಲಿಸುವುದರಿಂದ ಯಾವುದೇ ಅನುಕೂಲವನ್ನು ಹೊಂದಿರುವುದಿಲ್ಲ; ಹಾಗೂ

(iii) ಅಧಿವಿಚಾರಣಾ ನ್ಯಾಯಾಲಯದ ಅಭಿಪ್ರಾಯವನ್ನು ಒಪ್ಪಿಕೊಳ್ಳದಿರುವುದಕ್ಕೆ ಸಂಬಂಧಿಸಿದಂತೆ ಸಮರ್ಥವಾದ ಹಾಗೂ ಒಪ್ಪಿಕೊಳ್ಳುವಂಥ ಕಾರಣಗಳನ್ನು ದಾಖಲಿಸಬೇಕು.

17. ಅಪೀಲನ್ನು ನಿರ್ಧರಿಸುವಾಗ ಅಪೀಲು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ರೀತಿಯನ್ನು ***ಕೆ. ಅನ್ಬಳಗನ್ –ವಿರುದ್ಧ– ಕರ್ನಾಟಕ ಸರ್ಕಾರ***[5] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಡಕವಾಗಿ ಸ್ಪಷ್ಟಪಡಿಸಿರುತ್ತದೆ. ಅದು ಈ ಮುಂದಿನಂತಿರುತ್ತದೆ:

> "39. ಅಪೀಲು ನ್ಯಾಯಾಲಯವು ಪ್ರಕರಣದ ಎಲ್ಲಾ ಪ್ರಮುಖ ಅಂಶಗಳನ್ನು ಸಂಪೂರ್ಣವಾಗಿ ಹಾಗೂ ಸಮಗ್ರವಾಗಿ ಗ್ರಹಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಸಮಗ್ರವಾಗಿ

5. (2015) 6 ಎಸ್‌ಸಿಸಿ 158

ದಾಖಲೆಯ ಮೇಲೆ ತಂದಂಥ ಸಾಕ್ಷ್ಯವನ್ನು ಎಚ್ಚರಿಕೆ ಹಾಗೂ ಜಾಗರೂಕತೆಯಿಂದ ಪರಿಶೀಲಿಸಬೇಕಾಗಿರುತ್ತದೆ. ನ್ಯಾಯವನ್ನು ಸಮುಚಿತವಾಗಿ ನಿರ್ವಹಣೆ ಮಾಡುವಂತೆ ನೋಡಿಕೊಳ್ಳುವುದು ನ್ಯಾಯಾಧೀಶರ ಕರ್ತವ್ಯವಾಗಿದ್ದು, ಅದು ನ್ಯಾಯಾಧೀಶರ ಪರಮ ಆದ್ಯತೆಯಾಗಿರುತ್ತದೆ. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಯುಕ್ತ ನೆರವು ಲಭ್ಯವಿಲ್ಲದಿದ್ದರೂ ಸಹ, ಅದೊಂದೆ ಕಾರಣಕ್ಕೆ ಸದರಿ ಹೊಣೆಗಾರಿಕೆಯನ್ನು ಬಿಟ್ಟುಬಿಡುವಂತಿರುವುದಿಲ್ಲ ಅಥವಾ ತ್ಯಜಿಸುವಂತಿರುವುದಿಲ್ಲ ಅಥವಾ ಪರಿತ್ಯಜಿಸುವಂತಿರುವುದಿಲ್ಲ. ಅಪೀಲು ನ್ಯಾಯಾಲಯವು ವಿಷಯಗಳನ್ನು, ಆರೋಪಿತ ಸಂಕೀರ್ಣ ಕಾರಣಗಳನ್ನು ಹಾಗೂ ದಾಖಲೆ ಮೇಲಿನ ವಿಷಯಗಳನ್ನು ಅಗತ್ಯಪಡಿಸಿದಂತೆ ವಿಶ್ಲೇಷಿಸುವುದರಿಂದ ಮಾಡುವ ತಾರ್ಕಿಕ ಕಾರಣಗಳ ತಂತುಗಳನ್ನು ನಿಷ್ಕರ್ಷಿಸುವ ಅಗತ್ಯತೆಯಿರುತ್ತದೆ. ಇದು ವ್ಯತಿರಿಕ್ತಗೊಳ್ಳುವಂತಿಲ್ಲ. ಸಾಕ್ಷ್ಯವನ್ನು ವಸ್ತುನಿಷ್ಠವಾಗಿ ಹಾಗೂ ನಿಷ್ಪಕ್ಷಪಾತವಾಗಿ ಪರಿಗಣಿಸಬೇಕಾಗಿರುವುದು ನ್ಯಾಯಾಧೀಶರ ಕರ್ತವ್ಯವಾಗಿರುತ್ತದೆ. ಅಪೀಲಿನಲ್ಲಿನ ಕಾರಣಗಳ ಹೇಳಿಕೆಗಳು ವಿವೇಚನಾ ಪೂರ್ಣವಾಗಿರಬೇಕು ಹಾಗೂ ಅವುಗಳನ್ನು ದೃಢವಾಗಿ ಅಭಿವ್ಯಕ್ತಿಸಬೇಕು”. ಸಾಕ್ಷ್ಯಗಳ ವಸ್ತುನಿಷ್ಠ ತೀರ್ಪು ಪಕ್ಷಪಾತವಿಲ್ಲದ ಹಾಗೂ ಪೂರ್ವಾಗ್ರಹವಿಲ್ಲದ ಉದಾತ್ತತೆಯನ್ನು ಪ್ರತಿಬಿಂಬಿಸುತ್ತದೆ. ನ್ಯಾಯಾಧೀಶರ ಚಿಂತನಾಶೀಲ ವ್ಯಕ್ತಿತ್ವವು ಅವರು ನೀಡುವ ತೀರ್ಪಿನಿಂದಲೇ ಸಮರ್ಥಿತವಾಗಿರಬೇಕು. ನ್ಯಾಯಾಧೀಶನಾದವನು ತನ್ನ ಎಲ್ಲಾ ರೀತಿಯ ದೌರ್ಬಲ್ಯಗಳನ್ನು ಹಾಗೂ ಅನಿಶ್ಚಿತತೆಗಳನ್ನು ದೂರ ಮಾಡಬೇಕು. ಇದೊಂದೆ ಆತನಿಗಿರುವ ಅಗ್ನಿಪರೀಕ್ಷೆ. ಅದೇ ರೀತಿ ಅದು ನಿರ್ಣಾಯಕ ಪರೀಕ್ಷೆಯೂ ಆಗಿರುತ್ತದೆ.

(ಇದಕ್ಕೆ ನನ್ನಿಂದ ಒತ್ತು ನೀಡಲಾಗಿದೆ)

18. ಪ್ರಸ್ತುತ ಪ್ರಕರಣದಲ್ಲಿ, ಮೊದಲ ಅಪೀಲು ನ್ಯಾಯಾಲಯದ ನ್ಯಾಯಾಧೀಶರು, ಪಕ್ಷಕಾರರು ಒದಗಿಸಿದಂಥ ಸಾಕ್ಷ್ಯವನ್ನು ಸ್ವಲ್ಪಮಟ್ಟಿಗೂ ಪ್ರಸ್ತಾಪಿಸಿರುವುದಿಲ್ಲ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ತೀರ್ಪನ್ನು ಮಾರ್ಪಾಡುಗೊಳಿಸಬೇಕಾದ ಅಗತ್ಯತೆಯಿರುತ್ತದೆಂಬ ತೀರ್ಮಾನಕ್ಕೆ ಹೇಗೆ ಬಂದರು ಎಂಬುದನ್ನು ಸಹ ಸೂಚಿಸಿರುವುದಿಲ್ಲ. ಪಕ್ಷಕಾರರ ನಿವೇದನೆಗಳನ್ನು ಪರಿಗಣಿಸಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 31ನೇ ನಿಯಮದ XLI ಕ್ರಮಾದೇಶದ ಅಗತ್ಯತೆಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿದ್ದು, ನೀಡಿರುವ ಸದರಿ ತೀರ್ಪಿನಲ್ಲಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಒಳಗೊಂಡಿರುವ ಯಾವ ಅಂಶವನ್ನು ಮಾರ್ಪಾಡುಗೊಳಿಸಬೇಕೆಂಬುದಕ್ಕೆ ಯಾವುದೇ ಆಧಾರ ಅಥವಾ ಕಾರಣವನ್ನು ಪ್ರಸ್ತಾಪಿಸಿರುವುದಿಲ್ಲ. ಅಧೀನ ಅಪೀಲು ನ್ಯಾಯಾಲಯದ ನ್ಯಾಯಾಧೀಶರು ತೀರ್ಮಾನಕ್ಕೆ ಪೂರಕವಾಗಿ ಯಾವುದೇ ಕಾರಣವನ್ನು ದಾಖಲಿಸದೆ ತೀರ್ಮಾನಕ್ಕೆ ಬಂದಿರುತ್ತಾರೆ. ಹಾಗಾಗಿ, ಅಪೀಲನ್ನು ನಿರ್ಧರಿಸುವಲ್ಲಿನ ಕಾರ್ಯವಿಧಾನದಲ್ಲಿ ಗಂಭೀರ ಸ್ವರೂಪದ ದೋಷ ಹಾಗೂ ನ್ಯಾಯಿಕ ದೃಷ್ಟಿಕೋನದ ಸಮಗ್ರ ಕೊರತೆ ಉಂಟಾಗಿರುವುದು ಸ್ಪಷ್ಟವಾಗಿರುತ್ತದೆ. ಪ್ರಶ್ನಿತ ತೀರ್ಪು ವ್ಯತಿರಿಕ್ತವಾದ, ಮನಸ್ಸಿಗೆ ಬಂದ ಹಾಗೆ ನೀಡಿದ, ಕಾನೂನು ಬಾಹಿರವಾದ ತೀರ್ಪಾಗಿದೆ. ಅಪೀಲನ್ನು ತೀರ ನಿರ್ಲಕ್ಷ್ಯದಿಂದ ತೀರ್ಮಾನಿಸಿದ್ದು, ಮಾನ್ಯ ವಕೀಲರಾದ ಶ್ರೀ ಎಂ.ಜಿ. ನಾಗನುರಿಯವರು, ಪ್ರಶ್ನಿತ ತೀರ್ಪು ನಿರ್ದಯವಾಗಿಯೂ, ಅನ್ಯಾಯದಿಂದ ಕೂಡಿದೆಯೆಂದು ಕಟುವಾಗಿ ಟೀಕಿಸಿರುವುದು ಸಮರ್ಥನೀಯವಾಗಿರುತ್ತದೆ.

19. ನನ್ನ ಪ್ರಕಾರ, ಅಪೀಲನ್ನು ಕಾನೂನಿಗನುಸಾರವಾಗಿ ನಿರ್ಧರಿಸದಿರುವುದರಿಂದ, ವಾಸ್ತವಾಂಶ ಹಾಗೂ ಕಾನೂನು ಎರಡೂ ಪ್ರಶ್ನೆಗಳನ್ನು ಕುರಿತಂತೆ ಮೊದಲ ಅಪೀಲು ನ್ಯಾಯಾಲಯವು ಪರಿಗಣಿಸಬೇಕಾದ ಅವಶ್ಯಕತೆ ಇರುತ್ತದೆ.

ಪರಿಣಾಮವಾಗಿ, ಅಪೀಲನ್ನು ಅಂಗೀಕರಿಸಿ, ಮೊದಲ ಅಪೀಲು ನ್ಯಾಯಾಲಯದ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಿದೆ. ವಿಷಯವನ್ನು ಹೇಳಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಹೊಸದಾಗಿ ತೀರ್ಪು ನೀಡುವ

ಮೊದಲ ಅಪೀಲು ನ್ಯಾಯಾಲಯದ ಮರು ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸಿದೆ. ಸುನಾವಣೆ ಹಾಗೂ ನಿರ್ಣಯಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ದೃಷ್ಟಿಯಿಂದ ಪಕ್ಷಕಾರರಿಗೆ, ದಿನಾಂಕ 30.07.2016 ರಂದು ಮೊದಲ ಅಪೀಲು ನ್ಯಾಯಾಲಯದ ಎದುರು ಹಾಜರಾಗಿ, ಆದೇಶಗಳನ್ನು ಸ್ವೀಕರಿಸಲು ನಿರ್ದೇಶಿಸಲಾಗಿರುತ್ತದೆ. ಅಧೀನ ಅಪೀಲು ನ್ಯಾಯಾಲಯವು ದಿನಾಂಕ 04.02.2017 ಕ್ಕಿಂತ ಮೊದಲು ಅಪೀಲನ್ನು ತೀರ್ಮಾನಿಸತಕ್ಕದ್ದು.

ಅಧೀನ ನ್ಯಾಯಾಲಯುಗಳ ದಾಖಲೆಗಳನ್ನು ಮೊದಲ ಅಪೀಲು ನ್ಯಾಯಾಲಯಗಳಿಗೆ ಕೂಡಲೇ ಕಳುಹಿಸಬೇಕಾಗಿರುತ್ತದೆ.

ರಿಜಿಸ್ಟ್ರಾರ್ ಜನರಲ್ ರವರಿಗೆ, ಈ ತೀರ್ಪಿನ ಒಂದು ಪ್ರತಿಯನ್ನು ಶ್ರೀ ಡಿ.ವೈ. ಬಸಾಪುರ್‌ರವರ ವೈಯಕ್ತಿಕ ದಾಖಲೆಗೆ ಹಾಗೂ ಮತ್ತೊಂದು ಪ್ರತಿಯ ಆಡಳಿತಾತ್ಮಕ ಕಾರಣಕ್ಕೆ ಸಂಬಂಧಿಸಿದಂತೆ ಆದೇಶಕ್ಕಾಗಿ ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಮಂಡಿಸಲು ನಿರ್ದೇಶಿಸಿದೆ.

---